# ಪಠ್ಯ ಪೂರಕ ಅಧ್ಯಯನ

## 1. ಗುಣಸಾಗರಿ ಪಂಢರಿಬಾಯಿ –ಡಾ. ಜಯಮಾಲಾ

### ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

1. ಪಂಢರಿಬಾಯಿ ಅವರ ತಂದೆ ತಾಯಿಯವರ ಹೆಸರೇನು?

   **ಉತ್ತರ** : ಪಂಢರಿಬಾಯಿ ಅವರ ತಂದೆ **ರಂಗರಾವ್** ಮತ್ತು ತಾಯಿ **ಕಾವೇರಿಬಾಯಿ.**

2. ಪಂಢರಿಬಾಯಿಯವರು ನಟಿಸಿದ ಮೊದಲ ಚಿತ್ರದ ಹೆಸರೇನು?

   **ಉತ್ತರ** : ಪಂಢರಿಬಾಯಿಯವರು ನಟಿಸಿದ ಮೊದಲ ಚಿತ್ರದ **'ವಾಣಿ'**

3. ಪಂಢರಿಬಾಯಿ ನಾಟಕ ರಂಗಕ್ಕೆ ಪ್ರವೇಶಿಸಬೇಕಾಗಿ ಬಂದದ್ದು ಯಾಕೆ?

   **ಉತ್ತರ** : ಪಂಢರಿಬಾಯಿ ಅವರು ಆಕಸ್ಮಿಕವಾಗಿ ನಾಟಕ ರಂಗಕ್ಕೆ ಪ್ರವೇಶ ಮಾಡಿದರು. **'ಮುದುಕನ ಮದುವೆ'** ನಾಟಕದಲ್ಲಿ ಅಭಿನಯಿಸುತ್ತಿದ್ದ ನಟಿ ಇನ್ನೇನು ನಾಟಕ ಆರಂಭಕ್ಕೆ ಅರ್ಧಗಂಟೆ ಬಾಕಿ ಇರುವಾಗ **'ಬರುವುದಿಲ್ಲ'** ಎಂಬ ವಾರ್ತೆ ಕಳಿಸಿದಳು. ಅದಕ್ಕಾಗಿ ಈ ಪಾತ್ರವನ್ನು ಪಂಢರಿಬಾಯಿ ಅವರೇ ಮಾಡಿದರು ಈ ಮೂಲಕ ಅವರು ನಾಟಕ ರಂಗ ಪ್ರವೇಶ ಮಾಡಿದರು.

4. ಪಂಢರಿಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ ಯಾವ ಪ್ರಶಸ್ತಿಯನ್ನು ನೀಡಲಾಗಿದೆ?

   **ಉತ್ತರ** : ಪಂಢರಿಬಾಯಿ ಅವರಿಗೆ ಜೀವಮಾನ ಸಾಧನೆಗಾಗಿ **2000 ದಲ್ಲಿ ಫಿಲ್ಮ್‌ಫೇರ್ ಪ್ರಶಸ್ತಿ**ಯನ್ನು ನೀಡಲಾಗಿದೆ.

5. ಪಂಢರಿಬಾಯಿಯವರು ಯಾರ ಮನಸ್ಸಿನಲ್ಲಿ ಅಮರರಾದರು?

   **ಉತ್ತರ** : ಪಂಢರಿಬಾಯಿಯವರು **ಕಲಾರಸಿಕರ ಮನಸ್ಸಿನಲ್ಲಿ** ಎಂದೆಂದಿಗೂ ಅಮರರಾದರು.

6. ಪಂಢರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?

   **ಉತ್ತರ** : ಪಂಢರಿಬಾಯಿ ಅವರು ಆಕಸ್ಮಿಕವಾಗಿ ನಾಟಕ ರಂಗಕ್ಕೆ ಪ್ರವೇಶ ಮಾಡಿದರು. **'ಮುದುಕನ ಮದುವೆ'** ನಾಟಕದಲ್ಲಿ ಅಭಿನಯಿಸುತ್ತಿದ್ದ ನಟಿ ಇನ್ನೇನು ನಾಟಕ ಆರಂಭಕ್ಕೆ ಅರ್ಧಗಂಟೆ ಬಾಕಿ ಇರುವಾಗ **'ಬರುವುದಿಲ್ಲ'** ಎಂಬ ವಾರ್ತೆ ಕಳಿಸಿದಳು. ನಾಟಕದ ಟಿಕೇಟುಗಳು ಪೂರ್ತಿ ಮಾರಾಟವಾಗಿದ್ದವು. ನಾಟಕ ನಿಂತರೆ ಬಹುದೊಡ್ಡ ಕಷ್ಟಕ್ಕೆ ಕುಟುಂಬ ಸಿಕ್ಕಿಕೊಳ್ಳುತ್ತಿತ್ತು. ಆ ಪಾತ್ರವನ್ನು ತಂಗಿ ಪಂಢರಿಬಾಯಿ ಕೈಲಿ ಏಕೆ ಮಾಡಿಸಬಾರದು? ಎಂಬ ಆಲೋಚನೆ ಅಣ್ಣ ವಿಮಾಲಾನಂದನಿಗೆ ಬಂತು. ಅದಕ್ಕಾಗಿ ಈ ಪಾತ್ರವನ್ನು ಪಂಢರಿಬಾಯಿ ಅವರೇ ಮಾಡಿದರು.

7. ರಂಗರಾವ್ ಅವರು ಮಗಳ ಹೆಸರನ್ನು ಪಂಢರಿಬಾಯಿ ಎಂದು ಬದಲಾಯಿಸಲು ಕಾರಣವೇನು?

   **ಉತ್ತರ** : ಪಂಢರಾಪುರದ ಪಂಢರಿನಾಥನಲ್ಲಿ ಅತೀವ ಶ್ರದ್ಧೆ ಮತ್ತು ಭಕ್ತಿಗಳನ್ನು ಹೊಂದಿದ್ದ ರಂಗರಾವ್, **ಗೀತಾ** ಎನ್ನುವ ಮಗಳ ಹೆಸರನ್ನು **ಪಂಢರಿಬಾಯಿ** ಎಂದು ಬದಲಿಸಿದರು.

8. ಪಂಢರಿಬಾಯಿಯವರು ಕಲಾವಿದೆಯಾಗಿ ರೂಪುಗೊಳ್ಳಲು ಸಹಕರಿಸಿದ ಅಂಶಗಳು ಯಾವುವು?

   **ಉತ್ತರ** : ಚಿಕ್ಕಂದಿನಿಂದಲೇ ಪಂಢರಿಬಾಯಿ ಅವರಿಗೆ ಸಂಗೀತದ ಅಭ್ಯಾಸವಾಗಿತ್ತು. ಹರಿಕಥೆ ಮಾಡುವುದನ್ನು ಹಾಗೂ ಕೀರ್ತನೆ ಹಾಡುವುದನ್ನು ಇವರು ಕಲಿತಿದ್ದರು. ಮನೆಯಲ್ಲಿ ಇದ್ದ ಸೃಜನಶೀಲ ವಾತಾವರಣ ಪಂಢರಿಬಾಯಿಯವರ **'ಕಲಾವಿದೆ'** ವ್ಯಕ್ತಿತ್ವವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿತು.